ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.

ಸಿಸಿ ನಂ. 312/2023

ಫಿರ್ಯಾದಿ ಆರೋಪಿ

ಜನತಾ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ.ಭಟ್ಕಳ, ವಿರುದ್ಧ ಮಹೇಂದ್ರ ದಯಾನಂದ ಸಣ್ಣನೆ

ಶಾಖೆ ಕುಮಟಾ.

ಆರೋಪಿಃ

ಮಹೇಂದ್ರ ದಯಾನಂದ ಸಣ್ಣನೆ ,
ಸಾಃ 40 ವರ್ಷ, ಬ್ಯೂಸಿನೆಸ್ ,
ಪಿಕ್ ಅಪ್ ಬಸ್ ಸ್ಟ್ಯಾಂಡ್ ಹತ್ತಿರ, ತಾಃ ಕುಮಟಾ .

– ದಂಡ ಪ್ರಕ್ರಿಯಾ ಸಂಹಿತೆ ಕಲಂ.251 ರಡಿ ಆಪಾದನೆ –

ನೀವು ದಿಃ 14–07–2017 ರಂದು ಫಿರ್ಯಾದುದಾರ ಸಂಸ್ಥೆಯಿಂದ ರೂ. 50,000/– ಸಾಲವನ್ನು ಪಡೆದಿದ್ದು , ಸದರಿ ಸಾಲವು ಕಟ್ ಬಾಕಿಯಾಗಿರುವುದರಿಂದ ನೀವು ಸದರಿ ಸಾಲದ ತೀರುವಳಿಯ ಸಲುವಾಗಿ ದಿಃ 29–06–2021 ರಂದು ಫಿರ್ಯಾದುದಾರರಿಗೆ ಕಡತೋಕಾ ಶಾಖೆಯ ಸಿಂಡಿಕೇಟ್ ಬ್ಯಾಂಕಿನ ಚೆಕ್ ನಂ. 222772 ನ್ನು ರೂ. 51,226/– ಕ್ಕೆ ನೀಡಿದ್ದು, ಸದರಿ ಚೆಕ್ ನ್ನು ನಗದೀಕರಿಸಲು ಅವರ ಬ್ಯಾಂಕರರಿಗೆ ಹಾಜರು ಪಡಿಸಿದಾಗ ನೀವು ಸದರ ಖಾತೆಯನ್ನು ಬಂದು ಮಾಡಿದ್ದಾರೆ ಎಂಬ ಹಿಂಬರಹದೊಂದಿಗೆ ಚೆಕ್ ಅಮಾನ್ಯಗೊಂಡು ವಾಪಸ್ಸು ಬಂದಿದ್ದು , ಈ ಕುರಿತು ನಿಮಗೆ ದಿಃ 09–07–2021 ರಂದು ವಕೀಲರ ಮುಖಾಂತರ ಅಂಚೆ ಮೂಲಕ ನೋಟಿಸು ನೀಡಿದ್ದು, ಸದರಿ ನೋಟಿಸು ನಿಮಗೆ ದಿಃ 12–07–2021 ರಂದು ಜಾರಿಯಾಗಿದ್ದರೂ ಸಹ ನೀವು ಸದರಿ ಚೆಕ್ ನಲ್ಲಿ ಹೇಳಿರುವ ಹಣವನ್ನು ವಾಪಸ್ಸು ಕೊಡದೇ ಕಲಂ 138 ಎನ್ ಐ ಆಕ್ಟ ನೇದರ ಪ್ರಕಾರ ಅಪರಾಧ ಮಾಡಿರುತ್ತೀರೆಂದು ನಿಮ್ಮ ಮೇಲೆ ಆಪಾದನೆ ಇದೆ, ಅದಕ್ಕೆ ಏನು ಹೇಳುತ್ತೀರಿ?

**ಪ್ರಶ್ನೆ – 1** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೇ?

ಉತ್ತರ –

**ಪ್ರಶ್ನೆ – 2** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ಪ್ರತಿ ರಕ್ಷೆ ಇದೆಯೆ?

ಉತ್ತರ –

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ
ದಿಃ 28-03-2024.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ